ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು)—

ಅ) ವಿದ್ಯಾರ್ಥಿಗಳು — ೧೧೩
ವಿದ್ಯಾರ್ಥಿನಿಯರು — ೧೧೭

ಒಟ್ಟು ೨೩೦

ಆ) ಮಂಜೂರಾದ ಅಧ್ಯಾಪಕರ ಸಂಖ್ಯೆ ೩. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ೨.

ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಪ್ರಾರಂಭವಾದ ಪ್ರಾಥಮಿಕ ಶಾಲೆಗೆ ಶಿಕ್ಷಕರ ಮಂಜೂರಾತಿ ಬಗ್ಗೆ

೭೭೩. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ)— ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೩ರಿಂದ ಈವರೆಗೂ ಕುಂದಾಪುರ ತಾಲ್ಲೂಕಿನಲ್ಲಿ ಮಂಜೂರಾದ ಹೊಸ ಶಾಲೆಗಳು ಎಷ್ಟು?

ಆ) ಸದರಿ ಹೊಸ ಶಾಲೆಗಳಿಗೆ ಮಂಜೂರಾದ ಅಧ್ಯಾಪಕರ ಸಂಖ್ಯೆ ಎಷ್ಟು?

ಇ) ಕೊರತೆ ಇದ್ದಲ್ಲಿ ಆದನ್ನು ಎಂದು ಸರಿಪಡಿಸ ಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ಮಂತ್ರಿಗಳು)

ಅ) ಎರಡು ಸರ್ಕಾರಿ ಪ್ರೌಢ ಶಾಲೆಗಳು ಮಾತ್ರ ಮಂಜೂರಾಗಿವೆ.

ಆ) ೧೯೮೪-೮೫ — ೨
೧೯೮೫-೮೬ — ೩
೧೯೮೬-೮೭ — ೧೦

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ನೇಮಕಾತಿ ಬಗ್ಗೆ

೭೭೪. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಕಾವ್ರಾಡಿ ಗ್ರಾಮದ ಕಾಡ್ಲೂರು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಆ) ಆ ಶಾಲೆಗೆ ಮಂಜೂರಾಗಿರುವ ಹಾಗೂ ಕೊರತೆ ಇರುವ ಅಧ್ಯಾಪಕರ ಸಂಖ್ಯೆ ಎಷ್ಟು?

ಇ) ಕೊರತೆ ಇರುವ ಹಿಂದಿ ಅಧ್ಯಾಪಕರ ಹುದ್ದೆಗೆ ನೇಮಕಾತಿ ಆಗಿದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು)—

ಅ) ವಿದ್ಯಾರ್ಥಿಗಳು — ೧೪೦
ಆ) ವಿದ್ಯಾರ್ಥಿನಿಯರು — ೧೨೫

ಒಟ್ಟು ೨೬೫

ಆ) ಮಂಜೂರಾದ ಶಿಕ್ಷಕರ ಸಂಖ್ಯೆ ೪, ಕೊರತೆ ಇರುವ ಶಿಕ್ಷಕರ ಸಂಖ್ಯೆ ೧

ಇ) ಹಿಂದಿ ಅಧ್ಯಾಪಕರ ಹುದ್ದೆ ಮಂಜೂರಾಗಿರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಡೆನ್‌ಮಾರ್ಕಿನ ಸಹಾಯದಿಂದ ಮಾಡಿದ ವೆಚ್ಚದ ಬಗ್ಗೆ

೧೭೪೨. ಶ್ರೀ ಆರ್. ಎನ್. ನಾಯಕ್ (ಭಟ್ಕಳ) ಗ್ರಾಮಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 'ಡೆನ್ಮಾರ್ಕ್' ಸರ್ಕಾರದ ಸಹಾಯದಿಂದ ಈ ತನಕ ಎಷ್ಟು ಹಣ ಖರ್ಚು ಮಾಡಲಾಗಿದೆ? ಹಾಗೂ ಖರ್ಚು ಮಾಡಿದ ವಿಚಿನ್ನ ಯಾವುವು?

ಆ) ಖರ್ಚಾದ ಒಟ್ಟು ಹಣದಲ್ಲಿ ಕರ್ನಾಟಕ ಭೂ ಸೇನಾ ನಿಗಮದವರು ಎಷ್ಟು ಹಣ ವೆಚ್ಚ ಮಾಡಿದ್ದಾರೆ?

ಇ) ಡೆನ್‌ಮಾರ್ಕ್ ಸರ್ಕಾರದ ಸಹಾಯ ಉತ್ತರ ಕನ್ನಡ ಜಿಲ್ಲೆಯ ಮಟ್ಟಿಗೆ ಸ್ಥಗಿತಗೊಂಡಿದೆಯೆ?

ಈ) ಈ ರೀತಿ ಸಹಾಯ ಸ್ಥಗಿತಗೊಳ್ಳಲು ಭೂಸೇನಾ ನಿಗಮ ಕಳಪೆ ಕೆಲಸ ಮಾಡಿದೆಯೆಂದೂ ಡೆನ್‌ಮಾರ್ಕ್ ಸರ್ಕಾರದ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದು ನಿಜವೇ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು)—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ 'ಡೆನ್ಮಾರ್ಕ್' ಸಹಾಯದಿಂದ ಕೆಲಸಗಳನ್ನು ಮಾಡಿದ ವಿಚಿನ್ನ ಗಳಲ್ಲಿ ಭೂಸೇನಾ ನಿಗಮವೂ ಒಂದು. ಭೂ ಸೇನಾ ನಿಗಮದಿಂದ ಈವರೆಗೆ ರೂ. ೪.೭೬ ಕೋಟಿ ಖರ್ಚಾಗಿದೆ.

ಆ) ಭೂ ಸೇನಾ ನಿಗಮದಿಂದ ರೂ. ೪.೭೬ ಕೋಟಿ ಖರ್ಚು ಮಾಡಲಾಗಿದೆ.

ಇ) ಭೂ ಸೇನಾ ನಿಗಮಕ್ಕೆ ವಹಿಸಿದ ೩೦ ರಸ್ತೆ ಕಾಮಗಾರಿ, ೪ ಸೇತುವೆ ಕೆಲಸಗಳು, ೮ ಚಿಕ್ಕ ನೀರಾವರಿ ಕೆರೆಗಳು, ೯ ಪತ್ತ ನೀರಾವರಿ ಕಾಮಗಾರಿಗಳು ಹಾಗೂ ೧೬ ಬಂದರುಗಳ ಕಾರ್ಯ ಮುಂಗಿದಿದ್ದು ೧೯೮೩-೮೪ ಹಾಗೂ ೮೫ನೇ ಇಸವಿಯಲ್ಲಿ ಈ ಎಲ್ಲ ಕಾಮಗಾರಿಗಳನ್ನು ಲೇಕೋಪಯೋಗಿ ಇಲಾಖೆ ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ವಹಿಸಿ ಕೊಡಲಾಗಿದೆ, ೨ನೆಯ ಸ್ತರದ ಕಾಮಗಾರಿಗಳ ಕರಡು ವರದಿಯನ್ನು ಸರಕಾರಕ್ಕೆ ಒಪ್ಪಿಸಲಾಗಿದೆ.

ಈ) ತಾಂತ್ರಿಕ ತಜ್ಞರು, ಅರ್ಥಶಾಸ್ತ್ರಜ್ಞರು ಹಾಗೂ ವಿಜ್ಞಾನಿಗಳನ್ನೊಳಗೊಂಡ ಡೆನ್ಮಾರ್ಕ್ ಸರ್ಕಾರದ ತಂಡವು ಕೇಂದ್ರ ಸರ್ಕಾರದ ಪ್ರತಿನಿಧಿಗಳೊಂದಿಗೆ ಪ್ರತಿವರ್ಷ ಭೂಸೇನಾ ನಿಗಮದ ಕೆಲಸ ಗಳ ಪರಿಶೀಲನೆ ಮಾಡಿದೆ ಹಾಗೂ ಮಾಡುತ್ತಲಿರುತ್ತದೆ. ಈವರೆವಿಗೂ ಡೆನ್ಮಾರ್ಕ್ ಸರ್ಕಾರವು ಭೂ ಸೇನಾ ನಿಗಮದ ಕಾರ್ಯದ ಬಗ್ಗೆ ಯಾವ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ಕೆಲವೊಂದು ಕಾಮ ಗಾರಿಗಳಲ್ಲಿ ಅಲ್ಪಸ್ವಲ್ಪ ಸುಧಾರಣೆಗಳನ್ನು ಡೆನ್ಮಾರ್ಕ್ ಸರಕಾರದ ಪ್ರತಿನಿಧಿಗಳು ಸೂಚಿಸಿದ್ದು ಆ ಬಗ್ಗೆ ಸಹ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆ

೧೫೧೦ ಶ್ರೀ ಆರ್. ಎನ್. ನಾಯಕ್ (ಭಟ್ಕಳ) ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ೧೯೮೩-೮೪, ೧೯೮೪-೮೫ ೧೯೮೫-೮೬ನೇ ವರ್ಷಗಳಲ್ಲಿ ಸರ್ಕಾರದಿಂದ ಮಂಜೂರಾದ ಹಣವೆಷ್ಟು?

ಆ) ಪ್ರಸಕ್ತ ಸಾಲಿನಲ್ಲಿ ಎಷ್ಟು ಕೆಲಸಗಳನ್ನು ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ.

ಶ್ರೀ ಅಬ್ದುಲ್‌ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು)